ಓ. ಎಸ್ . 16/2017 ಡಿ.ಡಬ್ಲ್ಯೂ - 1 ಈಶ್ವರ ಸಿದ್ನಾಳೆ

( ದಿನಾಂಕ 9-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟಿ ಸವಾಲು : ವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದ -</u>**

1. ಈ ದಾವೆಯಲ್ಲಿ ವಾದಿ ಹಾಜರ ಮಾಡಿದ ಕಾಗದ ಪತ್ರಗಳನ್ನು ನೋಡಿದ್ದೆನೆ. ಈ ದಾವೆಗೆ ಸಂಬಂಧಪಟ್ಟಂತೆ ಪುರಸಭೆಯಲ್ಲಿ ಇರತಕ್ಕಂತಹ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ದಾವಾ ಆಸ್ತಿ ಏನು ಎಂಬ ಪ್ರಶ್ನೆಗೆ ರಸ್ತೆ ಎನಕ್ರೋಚ್ ಮಾಡಿ ಬಿಲ್ಡಿಂಗ ಕಟ್ಟುತ್ತಿದ್ದರು , ಆ ಕಾರಣದಿಂದ ಈ ಕೇಸ ಆಗಿರುತ್ತದೆ. ಸಿಟಿಎಸ್ 186ಎ/4 ಇರುತ್ತದೆ. ಇದು ಒಂದೇ ಆಸ್ತಿ ಇರುತ್ತದೆ.

2. ಪುರಸಭೆಯಲ್ಲಿ 40 ವರ್ಷದ ಹಿಂದೆ ಯಾರ ಮಾಲ್ಕಿ ಎಂದು ತೋರಿಸುತ್ತಿದ್ದವು ಎಂಬ ಪ್ರಶ್ನೆಗೆ ಸಾಕ್ಷಿ ನಾನು ಪರಿಶೀಲನೆ ಮಾಡಿ ಹೇಳಬೇಕಾಗುತ್ತದೆ , ಈಗ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪುರಸಭೆಯಲ್ಲಿ ರಿಕಾರ್ಡಗಳು ಇರುತ್ತವೆ. ದಾವಾಸ್ತಿ ಮೂಲತಃ ವಿರಕ್ತ ಮಠದ ಜಾಗ ಎಂದರೆ ನನಗೆ ಗೊತ್ತಿಲ್ಲ. ವಿರಕ್ತ ಮಠದ ಜಾಗ ಯಾರು ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಈ ಜಾಗದಲ್ಲಿ ಮನೆ ಕಟ್ಟಿದ ಬಗ್ಗೆ ನನಗೆ ಮಾಹಿತಿ ಇದೆ. ಅದು 2017 ರಲ್ಲಿ ಕಟ್ಟಿದ್ದಾರೆ. ಮನೆ ಕಟ್ಟಲು ಶಿವಾನಂದ ಬಸೆಟ್ಟೆಪ್ಪಾ ಜಿರಲಿ ಇವರು ಅರ್ಜಿ ಕೊಟ್ಟಿದ್ದರು. ನನಗೆ ಅರ್ಜಿ ದಿನಾಂಕ ಗೊತ್ತಿಲ್ಲ , ನೋಡಿ ಹೇಳಬೇಕಾಗುತ್ತದೆ. ಅರ್ಜಿಯ ಜೊತಗೆ ಯಾವ ಕಾಗದ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ದಾಖಲೆ ನೋಡಿ ಹೇಳಬಲ್ಲೆ . ಅರ್ಜಿಯ ಜೊತೆಗೆ ಅವರು ಬ್ಲೂ ಪ್ರಿಂಟ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾಖಲೆ ನೋಡಿ ಹೇಳಬಲ್ಲೆ .

( ಸಾಕ್ಷಿಗೆ ದಾಖಲೆ ತರಲು ನಿರ್ದೇಶನ ನೀಡಿ ಮಧ್ಯಾಹ್ನಕ್ಕೆ ಮುಂದೂಡಲಾಯಿತು.

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ